# ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಯಮರೆ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562125

ಸಂಖ್ಯೆ: ಗ್ರಾಪಂ/ಯಮರೆ/125/2022-23

ದಿನಾಂಕ: 01/03/2023

## : ದೃಡೀಕರಣ ಪತ್ರ :

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಯಮರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸದರಿ **ವಳಗೆರೆ ಕಲ್ಲಹಳ್ಳಿ ಗ್ರಾಮದ ಸರ್ವೆನಂ 130/2** ರಲ್ಲಿ 1 ಎಕರೆ 20 ಗುಂಟೆ, **131/3** ರಲ್ಲಿ 1 ಎಕರೆ ಮತ್ತು **131/9** ರಲ್ಲಿ 0 ಎಕರೆ 31 ಗುಂಟೆ ಒಟ್ಟು ವಿಸ್ತೀರ್ಣ 3 ಎಕರೆ 11 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಅರ್ಜಿದಾರರಾದ **ಎಸ್ ಮಾದವಿ, ರಾಧಮ್ಮ, ಲಕ್ಷ್ಮಣರೆಡ್ಡಿ** ರವರು ಆನೇಕಲ್ ಪ್ರಾಧಿಕಾರ ರವರಿಗೆ ಸದರಿ ಜಮೀನನ್ನು ಕೈಗಾರಿಕ ಉದ್ದೇಶದಿಂದ ವಾಸದ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಮನವಿ ಸಲ್ಲಿಸಿದ್ದು, ಪ್ರಾಧಿಕಾರದಿಂದ ಅನುಮೋದನೆ ನೀಡಲು ಹಾಗೂ ಪ್ರಶ್ನಿತ ಜಮೀನುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅರ್ಜಿದಾರರು ಮೂಲಕ ಸೌಕರ್ಯಗಳನ್ನು (ಮೇಲ್ಕಂಡ ಜಾಗಗಳಿಗೆ ರಸ್ತೆ ಸಂಪರ್ಕ ಸೇರಿದಂತೆ) ಅಭಿವೃದ್ಧಿ ಪಡಿಸಿದ ನಂತರ ಗ್ರಾಮ ಪಂಚಾಯಿತಿಯ ತಿರ್ಮಾನಕ್ಕೆ ಒಪ್ಪಿಗೆ ನೀಡಿ ನಿಯಮಾನುಸಾರ ಅಗತ್ಯ ಶುಲ್ಕಗಳನ್ನು ಪಾವತಿಸಿದಲ್ಲಿ ಮಾತ್ರ ಮೂಲ ಸೌಕರ್ಯಗಳನ್ನು ನಿರ್ವಹಣೆ ಮಾಡಲು ಗ್ರಾಮ ಪಂಚಾಯಿತಿಯಿಂದ ಯಾವುದೇ ಅಭ್ಯಂತರವಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಸದರಿ ಜಮೀನಿಗೆ 12 ಮೀ ಸಾರ್ವಜನಿಕ ರಸ್ತೆ ಸಂಪರ್ಕವು ಸಹ ಇರುತ್ತದೆ. ಮೇಲ್ಕಂಡ ಜಮೀನಿನ ಬಗ್ಗೆ ಯಾವುದೇ ತಂಟೆ ತಕರಾರು ವ್ಯಾಜ್ಯಗಳು ಇದ್ದಲ್ಲಿ, ಗ್ರಾಮ ಪಂಚಾಯಿತಿಯು ಜವಾಬ್ದಾರರಲ್ಲ, ಮಾಲೀಕರೇ ಹೊಣೆಗಾರರಾಗಿರುತ್ತಾರೆ.

**: ಷರತ್ತುಗಳು :**

1. ಭೂ ಪರಿವರ್ತಿತ ಅಧಿಕೃತ ಜ್ಞಾಪನ ಪತ್ರದಲ್ಲಿನ ಎಲ್ಲಾ ಷರತ್ತುಗಳನ್ನು ತಪ್ಪದೆ ಪಾಲಿಸತಕ್ಕದ್ದು
2. ಅರ್ಜಿದಾರರಿಗೆ ಯಾವುದೇ ರೀತಿಯಲ್ಲಿ ಗ್ರಾಮ ಪಂಚಾಯಿತಿಯು ಮಾಲೀಕತ್ವ ದೃಢೀಕರಿಸುವುದಿಲ್ಲ.
3. ಅರ್ಜಿದಾರರು ಮಾಲೀಕತ್ವ ದೃಢೀಕರಿಸಲು ದಾಖಲೆಗಳನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ.
4. ಮೇಲ್ಕಂಡ ಜಮೀನಿನ ಬಗ್ಗೆ ಯಾವುದೇ ತಂಟೆ ತಕರಾರುಗಳು ಹಾಗೂ ವ್ಯಾಜ್ಯಗಳಿದ್ದಲ್ಲಿ ಗ್ರಾಮ ಪಂಚಾಯಿತಿಯು ಜವಾಬ್ದಾರರಲ್ಲ ಮಾಲೀಕರೇ ಹೊಣೆಗಾರರಾಗಿರುತ್ತಾರೆ.
5. ಮೇಲ್ಕಂಡ ಸ್ವತ್ತಿನಲ್ಲಿ ಮಾಲೀಕರು ಮೂಲಕ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದಲ್ಲಿ ಹಾಗೂ ನಿಯಮಾನುಸಾರ ಗ್ರಾಮ ಪಂಚಾಯಿತಿಯು ನಿರ್ಧರಿಸುವ ಶುಲ್ಕ ಮತ್ತು ತೆರಿಗೆಗಳನ್ನು ಗ್ರಾಮ ಪಂಚಾಯಿತಿಗೆ ಪಾವತಿಸಲು ಇಚ್ಚಿಸಿದ್ದಲ್ಲಿ ಗ್ರಾಮ ಪಂಚಾಯಿತಿಯು ಮಾಲೀಕರೆ ಅಭಿವೃದ್ಧಿ ಪಡಿಸಿದ ಮೂಲ ಸೌಕರ್ಯಗಳನ್ನು ನಿರ್ವಹಿಸಿಕೊಂಡು ಹೋಗುತ್ತದೆ.
6. ನಿಯಮಾನುಸಾರ ಮಂಜೂರಾದ ಖರಾಬು ಜಮೀನನ್ನು ಹೊರತುಪಡಿಸಿರುತ್ತೆ.

ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಗ್ರಾಮ ಪಂಚಾಯಿತಿಯು ಕಾನೂನು ರೀತಿಯ ಕ್ರಮ ವಹಿಸಲಾಗುವುದು ಹಾಗೂ ಈ ದೃಡೀಕರಣ ಪತ್ರ ತಂತಾನೇ ರದ್ದಾಗುವುದು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಯಮರೆ ಗ್ರಾಮ ಪಂಚಾಯಿತಿ
ಸರ್ಜಾಪುರ ಹೋ॥ ಆನೇಕಲ್ ತಾ॥
ಬೆಂಗಳೂರು-562125